ಪಿಡಬ್ಲ್ಯೂ-1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ:23-10-2019

ಪಾಟೀ ಸವಾಲು : ಶ್ರೀ. ಡಿ.ಎಲ್.ಕೆ 1 ರಿಂದ 4, 6 ಮತ್ತು 7ನೇ ಪ್ರತಿವಾದಿಪರ ವಕೀಲರಿಂದ

1ನೇ ವಾದಿ ವ್ಯವಸಾಯ ಮಾಡುತ್ತಾರೆ. 1 ಮತ್ತು 2ನೇ ವಾದಿ ಅಣ್ಣ ತಂಗಿಯರು. ಆದರೇ ಬೇರೆ ಬೇರೆ ವಾಸವಿದ್ದಾರೆ. ಪ್ರತಿವಾದಿ 1 ರಿಂದ 7 ರವರು 1 ಮತ್ತು 2ನೇ ವಾದಿಯರ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಎಂದರೆ ಸರಿ. 8ನೇ ಪ್ರತಿವಾದಿ 4ನೇ ಪ್ರತಿವಾದಿಗೆ ಸೇರಿದ 9 ಗುಂಟೆ ಸ್ವತ್ತನ್ನು ಖರೀದಿ ಮಾಡಿರುವುದಕ್ಕೆ ಆತನನ್ನು ಪಕ್ಷಗಾರನ್ನಾಗಿ ಮಾಡಿದ್ದೇನೆ ಎಂದರೆ ಸರಿ. 1973-74 ರಿಂದ ವಾದಿಯರು ಮತ್ತು 1 ರಿಂದ 7ನೇ ಪ್ರತಿವಾದಿಯರು ಒಟ್ಟಿಗೆ ಇದ್ದರು ಎಂದರೆ ಇಲ್ಲ. 1ನೇ ಪ್ರತಿವಾದಿ 1976 ರಿಂದ ಬೇರೆ ಇದ್ದಾರೆ. 1976 ರಿಂದ 2ನೇ ಪ್ರತಿವಾದಿ ಆತನಿಗೆ ಸೇರಿದ ಮನೆಯಲ್ಲಿ ಬೇರೆ ಇದ್ದಾರೆ. 3ನೇ ಪ್ರತಿವಾದಿ 1983 ರಿಂದ ಆತನಿಗೆ ಸೇರಿದ ಮನೆಯಲ್ಲಿ ಬೇರೆ ವಾಸವಿದ್ದಾರೆ. ಅದೇ ರೀತಿ 4ನೇ ಪ್ರತಿವಾದಿಯೂ ಸಹ 1983 ರಿಂದ ಆತನಿಗೆ ಸೇರಿದ ಮನೆಯಲ್ಲಿ ಬೇರೆ ವಾಸವಿದ್ದಾರೆ. 5ನೇ ಪ್ರತಿವಾದಿ ಸುದ್ದಗುಂಟೆ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಅದು ಅವರ ಗಂಡನ ಮನೆ. 6ನೇ ಪ್ರತಿವಾದಿ ತೊರೆನಹಳ್ಳಿಯಲ್ಲಿ ಗ್ರಾಮದಲ್ಲಿ ಆಕೆಯ ಗಂಡನ ಮನೆಯಲ್ಲಿ ಮದುವೆಯಾದ ಕಾಲದಿಂದಲೂ ವಾಸವಿದ್ದಾರೆ. ಅದೇ ರೀತಿ 7ನೇ ಪ್ರತಿವಾದಿ ಆಲಪ್ಪನಹಳ್ಳಿ ಯಲ್ಲಿ ಮದುವೆಯಾದ ಕಾಲದಿಂದಲೂ ಗಂಡನ ಮನೆಯಲ್ಲಿ ವಾಸವಿದ್ದಾರೆ.

2. ನನ್ನ ತಾಯಿ ಮದುವೆಯಾದ ಕಾಲದಿಂದಲೂ ಗಂಡನ ಮನೆಯಲ್ಲಿ ವಾಸವಿದ್ದಾರೆ. 1976 ರಿಂದ 1997 ರವರೆಗೆ ಅವರ ತಂದೆಯಿಂದ ಸ್ವಲ್ಪ ಸ್ವಲ್ಪ ಆಸ್ತಿಯನ್ನು ಪಡೆದುಕೊಂಡು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸರಿ. ದಿ.15-12-2006 ರಲ್ಲಿ ನನ್ನ ತಾತ ಚಿಕ್ಕಮುನಿಶಾಮಪ್ಪ ಜೀವಂತವಾಗಿದ್ದರು ಎಂದರೆ ಸರಿ.

ಅವರು ದಿ.04-05-2007 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಆತನ ಹೆಂಡತಿ 2004 ರಲ್ಲಿ ಮರಣ ಹೊಂದಿರುತ್ತಾರೆ. ವಾದ ಪತ್ರದಲ್ಲಿ ಚಿಕ್ಕಮುನಿಶಾಮಪ್ಪ ಮರಣ ಹೊಂದುವ ತುಂಬಾ ವರ್ಷಗಳ ಹಿಂದೆ ಆತನ ಹೆಂಡತಿ ಮರಣ ಹೊಂದಿರುತ್ತಾರೆ ಎಂದು ತಿಳಿಸಿರುವ ಅಂಶ ಸುಳ್ಳಾಗಿರುತ್ತದೆ. ನನ್ನ ತಾತನಿಗೆ ಅವರ ತಂದೆಯಿಂದ ಪಿತ್ರಾರ್ಜಿತ ವಾಗಿ ಸರ್ವೇ ನಂ.14/1 ಮತ್ತು 14/2 ರಲ್ಲಿ ಸೇರಿ 1 ಎಕರೆ 12 ಗುಂಟೆ, ಸರ್ವೇ ನಂ.17 ರಲ್ಲಿ 2 ಎಕರೆ 20 ಗುಂಟೆ, ಸರ್ವೇ ನಂ.85/2 ಅಣ್ಣೇಶ್ವರದಲ್ಲಿ 18 ಗುಂಟೆ ಸ್ವತ್ತು ಬಂದಿರುತ್ತದೆ. ಸರ್ವೇ ನಂ.17 ಭೂ ನ್ಯಾಯಾ ಮಂಡಳಿಯಿಂದ ಚಿಕ್ಕಮುನಿಶಾಮಪ್ಪ ರವರಿಗೆ ಬಂದಿರುತ್ತದೆ ಎಂದರೆ ಸುಳ್ಳು. ಪಿತ್ರಾರ್ಜಿತವಾಗಿ ಬಂದಿರುತ್ತದೆ. ಬೈಜಾಪುರದಲ್ಲಿರುವ ಸರ್ವೇ ನಂ.17 ರಲ್ಲಿ 4 ಎಕರೆ ಇದ್ದು ಅದರಲ್ಲಿ 6 ಗುಂಟೆ ಕರಾಬು ಇರುತ್ತದೆ ಎಂದರೆ ಸರಿ. ಸರ್ವೇ ನಂ.17 ರಲ್ಲಿ 4 ಎಕರೆ ಇದ್ದು ಅದರಲ್ಲಿ 6 ಗುಂಟೆ ಕರಾಬು ಇದ್ದು, 3 ಎಕರೆ 34 ಗುಂಟೆ ವ್ಯವಸಾಯ ಭೂಮಿ ಎಂದು ವಾದ ಪತ್ರದಲ್ಲಿ ಬರೆದಿರುವುದಿಲ್ಲ. ಸರ್ವೇ ನಂ.17 ರಲ್ಲಿ 2 ಎಕರೆ 20 ಗುಂಟೆಗೆ ಮಾತ್ರ ದಾವೆಯನ್ನು ಹಾಕಿದ್ದೇವೆ. ನನ್ನ ವಾದ ಪತ್ರದ ಕಂಡಿಕೆ 5 ರಲ್ಲಿ ತಿಳಿಸಿರುವ ಹಾಗೇ ಚಿಕ್ಕಮುನಿಶಾಮಪ್ಪ ರವರಿಗೆ ಎಲ್ಆರ್ಎಫ್286/1974-75 ರಂತೆ ಸ್ವತ್ತು ಬಂದಿರುತ್ತದೆ ಎಂದು ತಿಳಿಸಿರುವುದು ಸುಳ್ಳಿನಿಂದ ಕೂಡಿರುತ್ತದೆ. ಅದು ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ನನ್ನ ತಾತನ ಸ್ವಯಾರ್ಜಿತ ಆಸ್ತಿ ಯಾವುದು ಇರುವುದಿಲ್ಲ. ಎಲ್ಲವೂ ಪಿತ್ರಾರ್ಜಿತವಾಗಿ ಬಂದಿರುತ್ತವೆ. ನನ್ನ ಮುಖ್ಯ ವಿಚಾರಣೆಯಲ್ಲಿ ಇರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಕಂಡಿಕೆ 2 ರಲ್ಲಿ ತಿಳಿಸಿರುವ ಹಾಗೇ ಚಿಕ್ಕಮುನಿಶಾಮಪ್ಪ ರವರಿಗೆ ಎಲ್ಆರ್ಎಫ್286/1974-75, ಎಂ.ಆರ್ 1/79-80 ರ ರೀತಿಯಲ್ಲಿ ಸ್ವತ್ತು ಬಂದಿರುದಿಲ್ಲ. ಅದು ಪಿತ್ರಾರ್ಜಿತವಾಗಿ ಬಂದಿರುತ್ತದೆ. ಆದ್ದರಿಂದ ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶ ಸರಿಯಲ್ಲ ಎಂದರೆ ಸರಿ.

3. ಚಿಕ್ಕಮುನಿಶಾಮಪ್ಪ ಮರಣ ಹೊಂದುವ ಕಾಲಕ್ಕೆ 75 ವರ್ಷವಾಗಿತ್ತು. ಚಿಕ್ಕಮುನಿಶಾಮಪ್ಪ ರವರು ನನ್ನ ತಾಯಿಗೆ ಮರಣ ಶಾಸನ ಮೂಲಕ 1 ಎಕರೆ 15 ಗುಂಟೆ ಕೊಟ್ಟಿದ್ದರು ಅದನ್ನು ಹೊರತುಪಡಿಸಿ ದಾವೆ ಹಾಕಿದ್ದೇವೆ. ಈ ವಿಚಾರವನ್ನು ಯಾವ ಕಾರಣಕ್ಕೆ ತಿಳಿಸಿಲ್ಲ ಎಂದು ಹೇಳಲು ಆಗುವುದಿಲ್ಲ. ಮರಣ ಶಾಸನಕ್ಕೆ ಸಂಬಂಧಪಟ್ಟ ರೀತಿ 2008 ರಿಂದ ಮಾನ್ಯ ತಹಸಿಲ್ದಾರ್ ರವರು, ಉಪವಿಭಾಗಧಿಕಾರಿಗಳು, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ವಿಭಾಗ ಪತ್ರದ ರೀತಿ ಬಂದಿರುವ ಹಾಗೇ ಅವರ ಅವರ ಹೆಸರಿಗೆ ಮಾನ್ಯ ತಹಸಿಲ್ದಾರ್ ರವರು ಖಾತೆ ಮಾಡಿರುತ್ತಾರೆ ಎಂದರೆ ಇಲ್ಲ. ನಿಪಿ-7 ರ ರೀತಿಯಲ್ಲಿ ಖಾತೆ ಮಾಡುವಂತೆ ಆದೇಶವಾಗಿರುವ ಪ್ರತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ನಿಪಿ-7 ನ್ನು ನನ್ನ ತಾಯಿ ಹಾಗೂ ಮುನಿಶಾಮಪ್ಪ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಕೊಟ್ಟಿರುವುದಿಲ್ಲ. ನಿಪಿ-7 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ನಮ್ಮ ವಕೀಲರಿಗೆ ನಾನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ 1 ರಿಂದ 4ನೇ, 6 ಮತ್ತು 7ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.